Reg No B G 155 21 – 1 – 1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಆದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16–00
ಸೋಮವಾರ ಸಂಚಿಕೆ ವರ್ಷಕ್ಕೆ ರೂ 4

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮಾವೊ ಚಳವಳಿಯಲ್ಲಿ ಬಹುಮಂದಿ ಕೊಲೆ

ಸಂ. ಬಿಡಿಎ/ಎಂಎಜಿ/ಆರ್ಇಜಿ68–69

ಪ್ರಕಟಣೆ

ಈ ವಿಭಾಗದ 4 ಮತ್ತು 5 ನೇ ಶ್ರೇಣಿಯ ಎಲ್ಲ ರಿಜಿಸ್ಟರ್ಡ್ ಕೊಟ್ರ್ಯಾಕ್ಟರುಗಳ 1967 – 68 ಮತ್ತು 1968–69 ರ ರಿಜಿಸ್ಟ್ರೇಷನ್ 31–3–1969 ಕ್ಕೆ ಮುಗಿಯುವುದೆಂದು ಈ ಮೂಲಕ ತಿಳುವಳಿಕೆ ಕೊಡಲಾಗಿದೆ. 1969–70 ಮತ್ತು 1970–71 ಕ್ಕೆ ರಿಜಿಸ್ಟ್ರೇಷನ್ ರಿನ್ಯೂ ಮಾಡಲು ಅರ್ಜಿಗಳು, ನಿರ್ಧಾರಿತ ಫಾರಂನಲ್ಲಿ, ರಿನ್ಯೂಗೆ ನಿರ್ಧಾರಿತ ರೂ. 20 ನ್ನು ಈ ಆಫೀಸಿನ ಲೆಖ್ಖಕ್ಕೆ, ರಾಜ್ಯದ ಯಾವುದಾದರೂ ಖಜಾನೆ ಆಥವಾ ಬ್ಯಾಂಕ್ ಖಜಾನೆಯಲ್ಲಿ XXXVII ಪಿ. ಡಬ್ಲ್ಯೂ. ಜಿ ಮಿಸ್‌ಲೇನಿಯಸ್, 2 ಇತರ ರಸೀಟ್ಸ್, ಲೆಖ್ಖಕ್ಕೆ ಜಮಾನಾಡಿದ ಚಲನ್ನಿನೊಡನೆ ಈ ಆಫೀಸಿಗೆ 1969 ನೇ ಫೆಬ್ರವರಿ 1 ರೊಳಗೆ ತಲಪಿಸಬೇಕು, ತಪ್ಪಿದರೆ ರೂಲ್ಸ್ ಪ್ರಕಾರ ದಂಡ ವಿಧಿಸಲಾಗುವುದು. ಆದಾಯ ತೆರಿಗೆ, ಮಾರಾಟ ತೆರಿಗೆ ಕ್ಲಿಯರೆನ್ಸ್ ಸರ್ಟಿಫಿಕೇಟುಗಳೂ ಮತ್ತು ಸಾಲ್ವೆನ್ಸಿ ಸರ್ಟಿಫಿಕೇಟು (ಎಲ್ಲಿ ಆವಶ್ಯಕವೋ ಅಲ್ಲಿ) ಅರ್ಜಿಯೊಂದಿಗೆ ಇರಬೇಕು.

ಸಹಿ/– ಎ. ನಾಗಪ್ಪ
ಎಕ್ಸಿಕ್ಯುಟಿವ್ ಎಂಜಿನಿಯರ್
ಬಿಲ್ಡಿಂಗ್‌ಗಳ ವಿಭಾಗ
ಮೈಸೂರು

ಹಳೇ ಮೈಸೂರು

ಬೆಂಗಳೂರು— ಹಳೆಯ ಮೈಸೂರು ಜನರನ್ನು ಹತ್ತಿಕ್ಕಲಾಗಿದೆ, ಕಡೆಗಣಿಸಲಾಗಿದೆ, ತುಳಿಯುತ್ತಿರಲಾಗಿದೆ ಎಂದು ಮೊಜಿ ಮಂತ್ರಿ ಶ್ರೀ ದಯಾನಂದ ಸಾಗರ್ ಶಾಸನಸಭೆಯಲ್ಲಿ ಹೇಳಿದರು ; ಮೈಸೂರು ರಾಜ್ಯವನ್ನು ಎರಡು ಭಾಗ ಮಾಡಲೇಬೇಕಾಗುತ್ತದೆ ಎಂದೂ ಹೇಳಿದರು.

ಇಂದಿರಾರನ್ನರ ಪ್ರಶ್ನೆ

ಕಲ್ಕತ್ತಾ— ತುಪಾಕಿಯೇ ದೇಶದ ಅನೇಕ ಸಮಸ್ಯೆಗಳಿಗೆ ಏಕಮಾತ್ರ ಉತ್ತರವೆಂದು ನಕ್ಸಲೈಟರ [illegible]ಯನ್ನು, ಪ್ರಧಾನಿ ಇಂದಿರಾರವರ [illegible]ವಣಾ ಭಾಷಣ ಮಾಡುತ್ತಾ, ಅಲ್ಲಗಳೆದರು – ಅದು ಬಡವರು ಮತ್ತು ಹಿಂದುಳಿದವರನು ಉದ್ಧಾರ ಮಾಡುವ ಬದಲು ಹೆಚ್ಚು ಅದ, ಮುಪ ನೀತಿ ಎಂದು ಹೇಳಿದರು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀನುನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇಶಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಟಿ. ಬಿ. ಪಸನಯ್ಯನವರು, ಆಸೆರಾ ಟಾಕಿಮಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ. ಸಿ. ಮೋದಿಯವರು ಡಾ॥ ಆರ್. ಎಸ್. ನರಹುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯಪೂರ್ವಕ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಿಕೆಯಿಂದು ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ರಾಮರಾಜಪುರಂ, ಮೈಸೂರು 4.

ವಿದ್ಯಾರ್ಥಿ ಚಳವಳಿದಲ್ಲಿ

ಹೈದರಾಬಾದು— ಉಮ್ಡಾನಗರ ರೈಲ್ವೇ ಸ್ಟೇಷನ್ನಿನಲ್ಲಿ ತೆಲಂಗಾಣಾ ಚಳವಳಿಗಾರರು ಪ್ರಯತ್ನಿಸಿದ ದಾಳಿಯಲ್ಲಿ ಪೋಲೀಸರು ಗುಂಡುಹಾರಿಸಲು 6 ಮಂದಿ ವಿದ್ಯಾರ್ಥಿಗಳೂ ಮತ್ತಿತರರೂ ಗಾಯಗೊಂಡರು – ಪ್ರತ್ಯೇಕ ತೆಲಂಗಾಣಾರಾಜ್ಯ ಕೇಳಿಕೆಯಲ್ಲಿ ಅಬಿಡ್ ಮತ್ತು ರೆಸಿಡೆನ್ಸಿ ರಸ್ತೆಗಳಲ್ಲಿ ವಿದ್ಯಾರ್ಥಿಗಳು ಬಸ್ಸುಗಳ ಮೇಲೆ ಕಲ್ಲು ಬೀರಿ ನಷ್ಟಪಡಿಸಿದರು.

★

ದೇವಾಲಯಕ್ಕೆ ಕಾಣಿಕೆ

ಭದ್ರಾಚಲ— ಕಂಚಿ ಕಾಮಕೋಟಿ ಪೀಠದ ಜಗದ್ಗುರು ಶಂಕರಾಚಾರ್ಯರು ಭದ್ರಾಚಲದ ದೇವಾಲಯಕ್ಕೆ ಒಂದು ಆನೆ ಒಂದು ಕುದುರೆಯನ್ನು ಇತ್ತಿರುವರು.

★

ಸಂಗೀತ ಸಮ್ಮೇಳನ

ಮೈಸೂರು— ಚೌಡಯ್ಯ ಸ್ಮಾರಕ ಗಾಯನ ಸಮಾಜದ ಆಶ್ರಯದಲ್ಲಿ ತಾ॥ 15 ರಿಂದ ನಾಲ್ಕು ದಿನಗಳು ಪ್ರಥಮ ಸಂಗೀತ ಸಮ್ಮೇಳ ನಡೆಸಲಾಗುವುದೆಂದು ಅಧ್ಯಕ್ಷರೂ ಕಾರ್ಯದರ್ಶಿಯವರೂ ಮೊನ್ನೆ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು ; ಹಾಡುಗಾರಿಕೆ ಸ್ಪರ್ಧೆಯ ಏರ್ಪಾಡಿದೆಯೆಂದೂ, ಸಮ್ಮೇಳನದ ಅಧ್ಯಕ್ಷತೆ ವಹಿಸುವ ವಿದ್ವಾಂ ಶ್ರೀ ಚನ್ನಕೇಶವಯ್ಯನವರಿಗೆ "ಸಂಗೀತ ವಿದ್ಯಾ ನಿಧಿ" ಪ್ರಶಸ್ತಿ ಕೊಡಲಾಗುವುದೆಂದೂ ತಿಳಿಸಲಾಯಿತು.

●

ಮಕ್ಕಳ ಚಿತ್ರ ಸ್ಪರ್ಧೆ

ಮೈಸೂರು— ದೇವರಾಜ ಮೊಹಲ್ಲಾ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಸರಸ್ವತಿ ಯೂನಿಯರ್ಯ ಆಶ್ರಯದಲ್ಲಿ ಫೆಬ್ರವರಿ 2 ರಂದು ಭಾನುವಾರ 3 ವರ್ಷದಿಂದ 15 ವರ್ಷಗಳ ವಯಸ್ಸಿನ ಮಕ್ಕಳಿಗೆ 'ಸ್ಥಳದಲ್ಲೇ ಚಿತ್ರ ರಚನೆ" ಮಾಡುವ ಸ್ಪರ್ಧೆ ಏರ್ಪಡಿಸಲಾಗಿದೆ.

ಮಾವೋ ಚಳವಳಿ

ಹಾಂಕಾಂಗ್— ರಾಜಕೀಯ ವಿರೋಧಿಗಳಿರದಂತೆ ಮಾಡಲು, ಮಾವೋ ಚಳವಳಿಯಲ್ಲಿ ಕ್ವಾಂಗಟುಂಗು ಪ್ರಾಂತ್ಯದಲ್ಲಿ ಬಹು ಮಂದಿಯನ್ನು ಕೊಲೆ ಮಾಡಲಾಗುತ್ತಿದೆಯೆಂದು ವರದಿಯಾಗಿದೆ.

●

ಕಾಂಗ್ರೆಸ್

ಬೆಂಗಳೂರು— ರಾಜ್ಯಾದ್ಯಂತ ನವೆಂಬರಿನಲ್ಲಿ ನಡೆದ ತಾಲ್ಲೂಕು ಬೋರ್ಡು ಚುನಾವಣೆಯಲ್ಲಿ 171 ಬೋರ್ಡುಗಳಲ್ಲಿ 141 ನ್ನು ಕಾಂಗ್ರೆಸ್ಸು ವಶಪಡಿಸಿಕೆದಂಡಿದೆ

★

ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ

ಬೆಂಗಳೂರು— ನಾಲ್ಕನೇ ಯೋಜನೆಯಲ್ಲಿ ರಾಜ್ಯಹ 3000 ಗ್ರಾಮಗಳಿಗೆ ವಿದ್ಯುದ್ದೀಪ ಹಾಕಲು ಕೇಂದ್ರ ಸರಕಾರ ಮತ್ತು ಎಲ್ ಐ ಸಿ ನೆರವನ್ನು ಸರಕಾರ ಕೇಳಿದೆ.

○

ಲಾಠಿ ಛಾರ್ಜು

ಬೆಂಗಳೂರು— ಸೌತ್ ಎಂಡ್ ಸರ್ಕಲ್‌ನಲ್ಲಿ ಹತೋಟಿ ಮೀರಿದ ಆಟೋರಿಕ್ಷ ಮತ್ತು ದುರ್ಮಾರ್ಗಿಗಳ ಗುಂಪನ್ನು ಚದುರಿಸಲು ನಿನ್ನೆ ಪೋಲೀಸರು ಲಘು ಲಾಠಿ ಛಾರ್ಜು ಮಾಡಿದರು.

★

ಗುಂಡು ಹಾರಿಸಿದರು

ತ್ರಿವೇಂದ್ರಂ— ಆಂಚಾದಲ್ಲಿ-ವಿದ್ಯಾರ್ಥಿಗಳ ಗುಂಪಿನ ಮೇಲೆ ಪೋಲೀಸರು ಮೂರು ಸುತ್ತು ಗುಂಡುಹಾರಿಸಿದರು : ಸಾವು ನೋವು ಏನೂ ವರದಿಯಾಗಿಲ್ಲ ; ಗುಂಡು ಹಾರಿಸುವ ಮುಂಚೆ ಲಾಠಿ ಛಾರ್ಜು ನಡೆಯಿತು : 15 ನುಂದಿ ದಸ್ತಗಿರಿಯಾಗಿದೆ.

★

ಗೋಳೀಬಾರು

ಡಾಕಾ— ವಿದ್ಯಾರ್ಥಿಗಳ ಗುಂಪಿನ ಮೆರವಣಿಗೆ ಮೇಲೆ ಪೋಲೀಸರು ಗುಂಡು ಹಾರಿಸಿದರು – ಒಬ್ಬ ಸತ್ತು ಇಬ್ಬರು ಗೊಂಡರು.

ಕೊಲಂಬೋನಲ್ಲಿ ಭಾರತೀಯ ಕೈಗಾರಿಕಾ ಪ್ರದರ್ಶನ

ಈ ವರ್ಷದ ಭಾರತ ಗಣರಾಜ್ಯ ದಿನೋತ್ಸವದಂದು ಕೊಲಂಬೋ ನಗರದಲ್ಲಿ ಸಂಪೂರ್ಣ ಭಾರತೀಯ ಕೈಗಾರಿಕಾ ಪ್ರದರ್ಶನವನ್ನು ಸಿಂಹಳದ ಪ್ರಧಾನಿ ಡಡ್ಲಿ ಸೇನಾನಾಯಕರು ಉದ್ಘಾಟಿಸುತ್ತಾರೆ – ಇದರಿಂದ ಸಿಂಹಳದ ಜನತೆ ಭಾರತ ಆರ್ಥಿಕ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯನ್ನು ಪ್ರತ್ಯಕ್ಷವಾಗಿ ಕಾಣಲು ಅವಕಾಶ ಮಾಡಿಕೊಡುತ್ತದೆ – ಈ ಪ್ರದರ್ಶನವನ್ನು ಅಂತರರಾಷ್ಟ್ರೀಯ ಸಾಂಸ್ಕೃತಿಕ ಕೇಂದ್ರದ 60 ಸಹಸ್ರ ಚದರಡಿ ಪ್ರದೇಶದಲ್ಲಿ ಏರ್ಪಡಿಸಲ್ಪಾಗುತ್ತದೆ. ವಿವಿಧ ಸರಕುಗಳನ್ನು ತಯಾರಿಸುವ 200 ಕ್ಕಿಂತಲೂ ಹೆಚ್ಚು ಭಾರತೀಯ ತಯಾರಕರು ವಿವಿಧ ರಫ್ತು ಸಂವರ್ಧನಾ ಮಂಡಳಿಗಳು ಹಾಗೂ ಸರಕು ಮಂಡಲಿಗಳು ಭಾರತೀಯ ಪ್ರದರ್ಶನದಲ್ಲಿ ಭಾಗವಹಿಸುತ್ತವೆ.

ಆತ್ಮಹತ್ಯೆ

ಜೆಕ್ ಕೇಂದ್ರ ಸಚಿವಾಲಯದ ಕಾರ್ಯಗಳನ್ನು ಪ್ರತಿಭಟಿಸಿ ಇಪ್ಪತ್ತೊಂದು ವಯಸ್ಸಿನ ವಿದ್ಯಾರ್ಥಿಯು ಪ್ರಾಗ್ನ ಮುಖ್ಯ ಸ್ಥಳದಲ್ಲಿ ಬೆಂಕಿ ಹೀಮೆಯೆಣ್ಣೆ ಸುರಿದುಕೊಂಡು ಸುಟ್ಟುಕೊಂಡು ಸತ್ತನು.



Help The Gorakshana

SHAKTI SUDHA

A Superb Tonic

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳನ್ನೂ ಕುರಿತು ದೊರೆಯುತ್ತವೆ

Quality Printing — Neat Binding

Lakshminarasimha Press

Sivarampet, Mysore

Cow laughter should be banned Immediately

ವುಡ್‌ಲ್ಯಾಂಡ್ಸ್ 17-1-69 ರಿಂದ

.... ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಆ ಮ್ಮ ನಾ ಮ್ಮ

ತಾರಾಗಣ— ಶಶಿ ಕಪೂರ್, ಶರ್ಮಿಳಾ ಟಾಗೋರ್, ಪ್ರೇಂ ಛೋಪ್ರ ರಾಜೇಂದ್ರನಾಥ್, ಮದನಪುರಿ — ಸಂಗೀತ: ಕಲ್ಯಾಣ್‌ಜೀ ಆನಂದ್‌ಜೀ

[ದಿನ 3 ಪ್ರದರ್ಶನಗಳು]

ಅಪೆರಾ— ಜಯಪ್ರದ 2ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಕಾದಲ್ ವಾಹನಂ

ನಟವರ್ಗ— ಎಂ ಜಿ ರಾಮಚಂದ್ರ, ತಾಯ್ ನಾಗೇಶ್, ಅಶೋಕ್ ಕುಮಾರ್ ಸ್ಯಾಂಡೋ ಚಿನ್ನಪ್ಪ ದೇವರ್, ಸುಂದರರಾಜ್ ಜಯಲಲಿತ, ಮನೋರಮ

.... ದಿನವಹಿ 3 ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and graceing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4